ಕಂಡುಹಿಡಿದಿದ್ದರು. ಭಾರತದ ತಮಿಳರು, ಶ್ರೀಲಂಕಾದ ಜನರು, ಆಫ್ರಿಕಾದ ಅಂಗೋಲಾ ಹಾಗೂ ಎಡಭಾಗದವರು, ಮಡಗಾಸ್ಕರ್, ಮೊಜಾಂಬಿಕೋ, ಸಿಲೋನ್, ಇಂಡೊನೇಷ್ಯಾದ ಸುಮಾತ್ರ, ಜಾವಾ, ಬಾಲಿ, ಏಷ್ಯಾದ ಜನರಿಂದ ಹಿಡಿದು, ಕೇಪ್‌ನ ತುತ್ತ ತುದಿಯವರೆಗೂ ಸಿಕ್ಕ ಆಫ್ರಿಕನ್ನರನ್ನು ಬಿಡದೆ ಎಲ್ಲರನ್ನು ಕೂಲಿಯಾಳುಗಳನ್ನಾಗಿಸಿದ ಇವರು ಕೇಪ್ ಟೌನನ್ನು ಕೂಲಿಗಳ ಮಾರುಕಟ್ಟೆಯನ್ನಾಗಿಸಿದರು.

ಕೂಲಿಗಳು ಮದುವೆಯಾಗಬಹುದಿತ್ತು. ಆದರೆ ಅವರ ಸಂಸಾರಕ್ಕೂ ಆಳುವವರದ್ದೇ ಮೇಲ್ವಿಚಾರಣೆ. ಯಾರನ್ನು ಯಾವಾಗ ಬೇಕಾದರೂ ಹೇಗಾದರೂ ಬಳಸಿಕೊಳ್ಳುವ ಹಾಗೂ ಮಾರಾಟ ಮಾಡುವ ಅಮಾನವೀಯತೆಯಿಂದ ನೀರಿನ ಮೇಲೆ, ದಟ್ಟಕಾಡಿನಲ್ಲಿ, ಮರಳುಗಾಡಿನಲ್ಲಿ ಹೀಗೆ ದುರುಳರು ನಿರ್ಮಿಸಿದ ರಸ್ತೆಗಳಲ್ಲಿ ಆಳುಗಳು ನೋವು, ಅವಮಾನದಿಂದ ಚೆಲ್ಲಾಡಿಹೋಗಿದ್ದಾರೆ. ಕೊನೆಗೆ ದುಡಿಮೆಯ ಮಂತ್ರಕ್ಕೆ ಒಗ್ಗಿಹೋಗಿದ್ದಾರೆ. ಹಸಿವೆಯಿಂದ ನರಳುತ್ತ ಅವರು ನೀಡುವ ತುಂಡು ಬ್ರೆಡ್ಡಿಗಾಗಿ, ಹೆಣ್ಣುಮಕ್ಕಳು ಸೈನಿಕರ, ಆಗಂತುಕರ ತೃಷೆ ತೀರಿಸಿದ್ದಾರೆ. ಮಕ್ಕಳು ತಮ್ಮ ನೆಲೆಯನ್ನು ಅಗಲಿ ಕಾರ್ಮಿಕರಾಗಿ ದುಡಿದಿದ್ದಾರೆ.

ಕರಿಯರ ನೆಲದಲ್ಲಿ ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಹೆಗಡೇರ ಅಡಿಕೆ ತೋಟದಲ್ಲಿ ದುಡಿಯುವ ಹಳೆಪೈಕದವರ ಮೇಲಿನ ದಬ್ಬಾಳಿಕೆ ನೆನಪಾಯಿತು. ನಮ್ಮ ಭಾರತದ ರಾಜರುಗಳು, ಶ್ರೀಮಂತರು, ಮೇಲ್ಜಾತಿಯವರು ಯೂರೋಪಿಯನ್ನರ ಅಣ್ಣಮ್ಮಂದಿರೇ. ಮುಟ್ಟಿಸಿಕೊಳ್ಳದೇ ಉಳಿವ ಶ್ರೇಷ್ಠತೆಯ ವ್ಯಸನ ನಮ್ಮ ನೆಲದಲ್ಲೂ ಕಡಿಮೆಯೇನಿಲ್ಲ.

## ಸ್ವಾತಂತ್ರ್ಯಕ್ಕೆ ಮೊದಲಿನ ಕೇಪ್ ಟೌನ್

ಕೇಪ್ ಟೌನಿನ ಕ್ರೌರ್ಯ—ಇತಿಹಾಸವನ್ನು ಬಿಚ್ಚಿಡುತ್ತ, ತಾವು ಆ ಕಾಲದಲ್ಲಿ ಪಟ್ಟ ಕಷ್ಟಗಳನ್ನು ಎದೆಗೆ ಇಳಿಸುತ್ತ, ಇಲ್ಲೇ ಹುಟ್ಟಿ ಬೆಳೆದರೂ ತಮ್ಮ ಅತಂತ್ರ ಬದುಕನ್ನು 'ಬ್ರೌನ್' ಎಂದು ಕರೆಸಿಕೊಳ್ಳುವ 67 ವರ್ಷದ ಗೈಡ್ ಯಾಸ್ಮಿನ್ ಹೇಳುತ್ತಿದ್ದಳು. ಅವಳಮ್ಮ ಥಾಯ್ಲೆಂಡಿನವಳು, ಅಪ್ಪ ಗೋವಾದವ. ಗಂಡ ಇಂಡಿಯನ್. ಗಂಡ ಸತ್ತಾಗ ಇವಳಿಗಿನ್ನೂ ಚಿಕ್ಕ ವಯಸ್ಸು. ಮಕ್ಕಳನ್ನು ಕಟ್ಟಿಕೊಂಡು ಕೇಪ್ ಟೌನ್ ಖಾಲಿ ಮಾಡಬೇಕಾದ ಅನಿವಾರ್ಯತೆ. 'ಇಲ್ಲೇ ಹುಟ್ಟಿ, ಇಲ್ಲೇ ಬೆಳೆದ ನಾವು ಎಲ್ಲಿಗೆ ಹೋಗುವುದು? ಒಂದು ಮಗುವಿಗೆ ಗುರುತಿನ ಕಾರ್ಡ್ ಸಿಕ್ಕಿತ್ತು. ಇನ್ನೊಂದಕ್ಕೆ ಇಲ್ಲ. ಆಗ ಲಂಚ ಕೊಟ್ಟು ನನ್ನ ಸಂಸಾರವನ್ನು ನೆಲೆಯಾಗಿಸಿಕೊಳ್ಳಲು ಬಹಳ ಕಷ್ಟಪಟ್ಟೆ. ಇಲ್ಲಿಯ ಸರಕಾರ **'full of corruption uph'** ಎಂದು ನಿಟ್ಟುಸಿರುಬಿಟ್ಟಳು.

ತರತಮದ ಸಾಮಾಜಿಕ ನಡವಳಿಕೆಗಳು ಇಲ್ಲಿ ಸರ್ವೇ ಸಾಮಾನ್ಯ. ಇವತ್ತಿಗೂ ಫ್ರೆಂಚರ, ಡಚ್ಚರ, ಜ್ಯೂಯಿಶರ ಹಿಡಿತದಲ್ಲಿರುವ, ಸುಂದರ ಬೆಟ್ಟದ ತಪ್ಪಲಲ್ಲಿ ನೋಡಿದಷ್ಟೂ ದೂರದವರೆಗೂ ಕಾಣುವ ಸಮೃದ್ಧ ದ್ರಾಕ್ಷಿ ತೋಟಗಳಿವೆ. ಆದರೆ ಮಣ್ಣಲ್ಲಿ ದುಡಿಯುವವರು, ವೈನ್ ತಯಾರಿಯಲ್ಲಿ ಕೆಲಸ ಮಾಡುವವರು ಇಂದಿಗೂ ಕಪ್ಪು ಜನರೇ. ಅಂದಿನ ಕಿರುಕುಳದ ಪ್ರಮಾಣ ಕಡಿಮೆಯಾಗಿದೆ. ಅಷ್ಟೇ!

ಯೂರೋಪಿಯನ್ನರು ಮಾತ್ರ ರಸ್ತೆಯಲ್ಲಿ ಹಾಕಿದ ಬೆಂಚಿನಲ್ಲಿ ಕೂರಬೇಕು ಎಂಬ ಲೇಬಲ್ ಅಂಟಿಸಿದ ಬೆಂಚುಗಳು ನೋಡಿದವರ ಹುಬ್ಬೇರಿಸುತ್ತ ಈಗ ಮ್ಯೂಸಿಯಂನಲ್ಲಿ ಕುಳಿತಿವೆ. ಅವರಿಗೆ ಸಾರಿಗೆಯೂ ಪ್ರತ್ಯೇಕವಾಗಿತ್ತು ಎಂಬುದು ಈಗ ಇತಿಹಾಸ. ಆರೆಂಜ್ ಬಸ್ಸಿಗೆ ಹತ್ತುತ್ತಿದ್ದವರು ಯೂರೋಪಿಯನ್ನರು ಮಾತ್ರ. ಗ್ರೀನ್ ಬಸ್ಸಿಗೆ ಉಳಿದವರು. ಫ್ಯೂಡಲ್ ಹಳ್ಳಿಯೊಂದರಲ್ಲಿ ಚಪ್ಪಲಿ ಕೈಯಲ್ಲಿ ಹಿಡಿದು ಮೇಲ್ವರ್ಗದ ಬೀದಿ ಹಾದು ಹೋಗುತ್ತಿದ್ದ ಜಾಡಮಾಲಿಯೊಬ್ಬರು ನೆನಪಿಗೆ ಬಂದರು. ನಮ್ಮ ನಗರದಲ್ಲೂ ಮೇಲ್ವರ್ಗದವರ ಕಸ ಬಳಿಯುವುದು ಪೌರ ಕಾರ್ಮಿಕರೇ ಎಂಬುದೂ ನೆನಪಾಯಿತು.

ಸ್ವತಂತ್ರ ಬಂದರೂ ಇಂದಿಗೂ ಕೇಪ್ ಟೌನಿನಲ್ಲಿ ಬೀಚ್ ಸೈಡಿನ, ಪರ್ವತ ಸಾಲಿನ ಐಷಾರಾಮಿ ಬಂಗಲೆಗಳಲ್ಲಿ ವಾಸಿಸುವವರು ಬಿಳಿಯರೇ. ಅವರ ನಡುವೆ ಇಂದು ಅತ್ಯಂತ ಶ್ರೀಮಂತನಾಗಿರುವ ಭಾರತೀಯನ ಮನೆಯೊಂದನ್ನು ಗೈಡ್ ತೋರಿಸಿದಳು. ಹಾಗೆಯೇ ಬೀಚ್ ಸೈಡಿನಲ್ಲಿ ಉಳಿದಿರುವ ಒಂದೇ ಒಂದು ಗುಜರಾತಿ ಬಟ್ಟೆ ಅಂಗಡಿಯ ಮಾಲೀಕರನ್ನು ಪರಿಚಯಿಸಿದಳು. ತಮ್ಮ ನೆಲದ ಸೆಳೆತ ಹೊರದೇಶದಲ್ಲಿ





ಕೇಪ್ ಟೌನ್‌ನಲ್ಲಿ ಲೇಖಕಿ

## ಮರೆಯಲಿ ಹ್ಯಾಂಗ...

ಆಡೀಸ್ ಅಬಾಬಾದ ಏರ್‌ಪೋರ್ಟಿನಲ್ಲಿ ನಮ್ಮದೊಂದು ನಿಲುಗಡೆ. ಅಲ್ಲಿ ಕುಳಿತ ಮುಸ್ಲಿಂ ಅಜ್ಜಿಯರ ವಿಧವಿಧದ ಕಿವಿಯ ಬುಗುಡಿಗಳು, ನನ್ನಜ್ಜಿಯ ವೇಷವನ್ನು ನೆನಪಿಸಿತ್ತು. ಕಚಪಿಚನೆ ಮಾತಾಡುತ್ತ ಬಿಳಿಯ ಹೊದಿಕೆಯೊಂದಿಗೆ ಅವರು ನಮ್ಮ ಹಳ್ಳಿಯ ಜಗುಲಿಯ ಮೇಲೆ ಕುಳಿತಂತೆ ನೆಲದ ಮೇಲೆ ಕುಳಿತು ನಮ್ಮೂರಿನ ಹೆಂಗಸರಂತೆ ಮಾತಿಗಿಳಿದಿದ್ದರು.

★

'ನನ್ನ ತಲೆಗೂದಲೇ ನನ್ನ ವೀಸಾ ಪಾಸ್‌ಪೋರ್ಟ್, ನಮ್ಮ ಐಡೆಂಟಿಟಿ' ಎಂದು ಏರ್‌ಲೈನಿನ ಜಾಹೀರಾತಿನಲ್ಲಿ ಹೇಳಿಕೊಳ್ಳುವ ಆಫ್ರಿಕಾದ ಹೆಣ್ಣುಮಕ್ಕಳು, ತಮಗೆ ಒಗ್ಗದ ಉಡುಪು ಹಾಗೂ ಕೇಶವಿನ್ಯಾಸದಿಂದಾಗಿ ತಮ್ಮದಲ್ಲದ ಭಾರದ ಸರಪಳಿಯನ್ನು ತಮಗೆ ಬಿಗಿದುಕೊಂಡಂತೆ ಕಾಣಿಸುತ್ತಾರೆ. ಅವರು ತಮ್ಮನ್ನು ಚಂದ ಕಾಣಿಸಿಕೊಳ್ಳುವ ಭರದಲ್ಲಿ ತಮ್ಮ ದೈವದತ್ತ ಮೈಯನ್ನು ವಿರೂಪಗೊಳಿಸಿಕೊಳ್ಳುತ್ತಾರೇನೋ? ಅವರ ಉಡುಪು, ಬದುಕು, ನೆಲಮೂಲಕ್ಕೆ ಹತ್ತಿರವಾಗಿದ್ದು, ಈಗ ಅದು ವಿರುದ್ಧ ದಿಕ್ಕಿನೆಡೆಗೆ ಮುಖ ಮಾಡಿ ನಿಂತಂತೆ ಕಾಣುತ್ತದೆ.

★

ಊರ ಹೊರಗಿನ ನಿರ್ಗತಿಕರ ಕಾಲೊನಿಗಳಲ್ಲಿ ಆಫ್ರಿಕಾದ ಹಳ್ಳಿಗಳಿಂದ, ಬುಡಕಟ್ಟುಗಳಿಂದ, ಮತ್ತೆಲ್ಲೋ ನೆಲೆಯಿಲ್ಲದೆ ನೆಲೆಗಾಗಿ ಬಂದು ನಿಂತವರ ನಡುವೆ ರಸ್ತೆ ಬದಿಯ ಎಲ್ಲ ಚಟುವಟಿಕೆಗಳು, ಮಾರಾಟ, ದಳ್ಳಾಳಿತನ, ನಮ್ಮ ಸಂತೆಯಂತೆ ನಡೆಯುತ್ತಿತ್ತು.